ನಿ-72
ಕ್ರ-52

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಎಸ್.ಎಲ್.ಭೋಜೇಗೌಡ ರವರ ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ**

ಭಾರತ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ರಾಜ್ಯದಲ್ಲಿನ ಜನರಿಗೆ ಆಧಾರ ಕಾರ್ಡು ನೀಡುತ್ತಿರುವುದು ಉತ್ತಮವಾದ ಯೋಜನೆಯಾಗಿರುತ್ತದೆ. ಆದರೆ ಸದರಿ ಯೋಜನೆಯ ನ್ಯೂನ್ಯತೆಗಳು ಸರ್ಕಾರದ ಗಮನಕ್ಕೆ ಬರದಿರುವುದು ದುರದೃಷ್ಟಕರ. ಇದರಿಂದ ಬಡವರಿಗೆ ಆಗುವ ತೊಂದರೆ ಹೇಳತೀರದು. ಕನ್ನಡದಲ್ಲಿ ಮತ್ತು ಆಂಗ್ಲ ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ನಮೂದಿಸಿದಾಗ ಒಂದಕ್ಕೊಂದು ತಾಳೆ ಇರುವುದಿಲ್ಲ. ಇದಕ್ಕೆಲ್ಲಾ ಜವಾಬ್ದಾರರು ಯಾರು?

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಕಸಬಾ ಹೋಬಳಿಯ ಎಸ್. ಕೋಡಗೀಹಳ್ಳಿ ಗ್ರಾಮವಿದ್ದು, ಇದರ ಪಿನ್ ಕೋಡ್ 572213 ಆಗಿರುತ್ತದೆ. ಜನರು ಆಧಾರನಲ್ಲಿ ನಮೂದಿಸುವಾಗ ಎಸ್. ಕೋಡಗೀಹಳ್ಳಿ ಬರುವುದಿಲ್ಲ. ಅದರ ಬದಲಿಗೆ ಸಿ.ಕೊಡಗೀಹಳ್ಳಿ ಎಂದು ಬರುತ್ತದೆ. ಕಡಬಾ ಹೋಬಳಿ ಬದಲಿ ಚಂದ್ರಶೇಖರ ಪುರ ಹೋಬಳಿ ಬರುತ್ತದೆ. ಇದರಿಂದ ಅಲ್ಲಿನ ಜನರಿಗೆ ಬ್ಯಾಂಕ್ ವ್ಯವಹಾರ ಹಾಗೂ ಇತರೆ ರೆವಿನ್ಯೂ ವ್ಯವಹಾರ ಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಸರ್ಕಾರ ಇದರ ಬಗ್ಗೆ ತುರ್ತು ಗಮನ ಹರಿಸಿ ಈ ಸಮಸ್ಯೆಯನ್ನು ಪರಿಹರಿಸಿ ಜನರಿಗೆ ಅನುಕೂಲ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯ ಬರಯಸುತ್ತೇನೆ.

**ಉತ್ತರ:**

ಭಾರತದ ನಿವಾಸಿಗಳಿಗೆ ವಿಶಿಷ್ಟ ಗುರುತು ಸಂಖ್ಯೆಯನ್ನು ನೀಡುವುದು ಮಹತ್ವಾಕಾಂಕ್ಷಿಯ ಗುರಿಯಾಗಿದ್ದು, ಭಾರತ ಸರ್ಕಾರದ ಭಾರತ ವಿಶಿಷ್ಟ ಗುರುತು ಪ್ರಾಧಿಕಾರವು (ಯುಐಡಿಎಐ) ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಈವರೆಗೆ ಸುಮಾರು 130ಕೋಟಿ (UIDAI ಒದಗಿಸಿದ ಮೇ 2020ರ ಯೋಜಿತ ಜನಸಂಖ್ಯೆಯ ಪ್ರಕಾರ) ಭಾರತೀಯ ನಿವಾಸಿಗಳಿಗೆ ಆಧಾರ್ ಅನ್ನು ನೀಡಲಾಗಿದ್ದು, ಭಾರತ ಸರ್ಕಾರವು ಆಧಾರ್ ನೋಂದಣಿ ಮತ್ತು ತಿದ್ದುಪಡಿ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಎಲ್ಲಾ ರಾಜ್ಯಗಳಲ್ಲಿ ನಿರ್ವಹಿಸುತ್ತಿರುತ್ತದೆ. ಕರ್ನಾಟಕ ರಾಜ್ಯದ ನಿವಾಸಿಗಳಿಗೆ ಈವರೆಗೆ ಸುಮಾರು 6.73 (ಶೇಕಡ 99.8) ಕೋಟಿ ನಿವಾಸಿಗಳಿಗೆ ಆಧಾರ್ ಅನ್ನು ವಿತರಿಸಲಾಗಿರುತ್ತದೆ. ರಾಜ್ಯದಲ್ಲಿಆಧಾರ್ ನೋಂದಣಿ ಮತ್ತು ತಿದ್ದುಪಡಿ ಕಾರ್ಯಗಳನ್ನು ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಚೆ ಕಛೇರಿ, ಬ್ಯಾಂಕ್, ಬಿ.ಎಸ್.ಎನ್.ಎಲ್. ಕಛೇರಿಗಳು ನಿರ್ವಹಿಸುತ್ತಿರುತ್ತವೆ.

ಪ್ರಸ್ತುತ ಆಧಾರ್ ನೋಂದಣಿ ಮತ್ತು ತಿದ್ದುಪಡಿಗಳನ್ನು ಯುಐಡಿಎಐರವರು ಸೃಜಿಸಿ ನಿರ್ವಹಿಸುತ್ತಿರುವ CELC (Child enrolment lite client) ಮತ್ತು ECMP (Enrolment client multi-platform) ತಂತ್ರಾಂಶಗಳ ಮೂಲಕ ಮಾಡಲಾಗುತ್ತಿರುತ್ತದೆ. ಸದರಿ ತಂತ್ರಾಂಶಗಳಲ್ಲಿ ಆಧಾರ್ ನೋಂದಣಿ / ತಿದ್ದುಪಡಿ ಮಾಡುವಾಗ ನಿವಾಸಿಗಳ ವೈಯಕ್ತಿಕ ಮಾಹಿತಿಯನ್ನು ಆಂಗ್ಲ ಭಾಷೆಯಲ್ಲಿ ನಮೂದಿಸಲಾಗುತ್ತಿದ್ದು, ಸದರಿ ಮಾಹಿತಿಯು ಕನ್ನಡಕ್ಕೆ ಸ್ವಯಂಚಾಲಿತವಾಗಿ ಅನುವಾದಗೊಳ್ಳುವುದು. ಆದಾಗ್ಯೂ, ತಂತ್ರಾಂಶದಲ್ಲಿ ಅನುವಾದಗೊಂಡ ಕನ್ನಡ ಮಾಹಿತಿಯನ್ನು ತಿದ್ದುಪಡಿ ಮಾಡಲು ಕೂಡ ಅವಕಾಶವಿರುತ್ತದೆ.

ಮುಂದುವರೆದು, CELC ಮತ್ತು ECMP ತಂತ್ರಾಂಶಗಳಲ್ಲಿ ಆಧಾರ್ ನೋಂದಣಿ / ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಆಧಾರ್ ಆಪರೇಟರ್‌ಗಳು ನಮೂದಿಸಲಾದ ನಿವಾಸಿಯ ವೈಯಕ್ತಿಕ

ಮಾಹಿತಿಯನ್ನು ಪರಿಶೀಲನೆಗಾಗಿ ನೋಂದಣಿದಾರರಿಗೆ ಪ್ರದರ್ಶಿಸಿ ಖಚಿತಪಡಿಸಿಕೊಳ್ಳಲಾಗುವುದು. ಈ ಹಿನ್ನಲೆಯಲ್ಲಿ ನೋಂದಣಿ / ತಿದ್ದುಪಡಿಯಾದ ಆಧಾರ್ ಕಾರ್ಡ್ ನಲ್ಲಿ ನಿವಾಸಿಗಳ ಮಾಹಿತಿಯು ಆಂಗ್ಲ ಮತ್ತು ಕನ್ನಡ ಭಾಷೆಯ ನಡುವೆ ವ್ಯತ್ಯಾಸವಿದ್ದಲ್ಲಿ, ಆಧಾರ್ ನೋಂದಣಿ / ತಿದ್ದುಪಡಿಯನ್ನು ಮಾಡಿರುವ ಆಪರೇಟರ್‌ನ ದೋಷವಾಗಿರುತ್ತದೆ, ವಿನಃ ತಾಂತ್ರಿಕ ದೋಷವಾಗಿರುವುದಿಲ್ಲ. ಈ ಸಂಬಂಧ ನೋಂದಣಿ / ತಿದ್ದುಪಡಿ ಸಂದರ್ಭದಲ್ಲಿ ದೋಷವಾಗದಂತೆ ಮಾಹಿತಿಯನ್ನು ನಮೂದಿಸಲು ಆಧಾರ್ ಆಪರೇಟರ್‌ಗಳಿಗೆ ಸೂಕ್ತ ತರಬೇತಿ ಒದಗಿಸುವುದು ಸಂಬಂಧಪಟ್ಟ ರಿಜಿಸ್ಟ್ರಾರ್ (ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ (ಇ-ಆಡಳಿತ), ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಚೆ ಕಛೇರಿ, ಬ್ಯಾಂಕ್, ಬಿ.ಎಸ್.ಎನ್.ಎಲ್)ಗಳ ಜವಾಬ್ದಾರಿಯಾಗಿರುತ್ತದೆ.

ಭಾರತ ವಿಶಿಷ್ಟ ಗುರುತು ಪ್ರಾಧಿಕಾರವು ತಮ್ಮ ದತ್ತಾಂಶದಲ್ಲಿ ಭಾರತ ಅಂಚೆ ಇಲಾಖೆಯು ಕಾಲ ಕಾಲಕ್ಕೆ ನೀಡುವ ಪಿನ್ ಕೋಡ್‌ಗಳ ಮಾಹಿತಿಯನ್ನು ಇಂದೀಕರಿಸಲಾಗಿರುತ್ತದೆ. ಅದರಂತೆ, ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿಯ ಎಸ್.ಕೊಡಗೀಹಳ್ಳಿ ಗ್ರಾಮದ ಪಿನ್‌ಕೋಡ್-572213 ಆಗಿದ್ದು, ಸದರಿ ಗ್ರಾಮದ ನಿವಾಸಿಗಳು ಆಧಾರ್ ನಮೂದಿಸುವಾಗ ಎಸ್. ಕೊಡಗೀಹಳ್ಳಿ ಬದಲಿಗೆ ಸಿ. ಕೊಡಗೀಹಳ್ಳಿ ಎಂದು ನಮೂದುಗೊಂಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಬಗ್ಗೆ ಆಧಾರ್ ದತ್ತಾಂಶದಲ್ಲಿ ಇಂದೀಕರಿಸಲು ಭಾರತ ವಿಶಿಷ್ಟ ಗುರುತು ಪ್ರಾಧಿಕಾರಕ್ಕೆ ಕ್ರಮಕೈಗೊಳ್ಳುವಂತೆ ಕೋರಲಾಗಿದೆ.

**ಕಡತ ಸಂಖ್ಯೆ: ಸಿಆಸುಇ 122 ಪಿಆರ್‌ಜೆ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ